ಕರ್ನಾಟಕ ಹೆಲ್ಪ್.ಇನ್ ಪ್ರಸ್ತುತಿ.....

# ಉದ್ಯೋಗವಾಣಿ

www.KarnatakaHelp.in



"ಶಿಕ್ಷಣದ ಉದ್ದೇಶವು ವ್ಯಕ್ತಿಯ ಪರಿಪೂರ್ಣತೆಯಾಗಿದೆ ಹೊರತು ಜೀವನಕ್ಕಾಗಿ ಉದ್ಯೋಗವನ್ನು ಪಡೆಯುವುದಕಲ್ಲ."
– ಸ್ವಾಮಿ ವಿವೇಕಾನಂದ

ಸಂಪಾದಕರು: ಭೀಮು.ದೊರೆ | ಮೇ 2026 । ಸಂಪುಟ 01 । ಸಂಚಿಕೆ 02 । ಪುಟ 02 | ಗಮನಿಸಿ: ಖಾಸಗಿ ಪ್ರಸಾರಕ್ಕಾಗಿ ಮಾತ್ರ

# ಅಪ್ರೆಂಟಿಸ್ ಶಿಪ್ ಭರಪೂರ ಭರ್ತಿ

## ಎಸ್‌ಬಿಐನಲ್ಲಿ 7150 ಸೀಟುಗಳು..

**ಮುಂಬೈ:** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬ) 2026–27ನೇ ಸಾಲಿಗೆ 1961ರ ಅಪ್ರೆಂಟಿಸ್ ಕಾಯ್ದೆಯಡಿ ಒಂದು ವರ್ಷದ ಅಪ್ರೆಂಟಿಸ್ ತರಬೇತಿಗಾಗಿ ಪದವೀಧರರಿಂದ ಅರ್ಜಿ ಆಹ್ವಾನಿಸಿದೆ.

ಕರ್ನಾಟಕ(276ಸೀಟು) ಸೇರಿದಂತೆ ವಿವಿಧ ರಾಜ್ಯಗಳಲ್ಲಿರುವ ತನ್ನ ಬ್ಯಾಂಕಿನ ಶಾಖೆಗಳಿಗೆ ಒಟ್ಟು 7150 ಸೀಟುಗಳಿಗೆ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡು ತರಬೇತಿ ಒದಗಿಸಲಿದೆ.

ಯಾವುದೇ ವಿಷಯದಲ್ಲಿ ಪದವಿ ಹೊಂದಿರುವವರು ಅರ್ಜಿ ಸಲ್ಲಿಸಲು ಅರ್ಹರು. ಏ.01ರಂತೆ, ಕನಿಷ್ಠ ವಯೋಮಿತಿ 20 ವರ್ಷ ಹಾಗೂ ಗರಿಷ್ಠ ವಯೋಮಿತಿ 28 ವರ್ಷ ಹೊಂದಿರಬೇಕು. ಸರ್ಕಾರಿ ನಿಯಮಗಳ ಪ್ರಕಾರ ಒಬಿಸಿ ಪ.ಜಾತಿ, ಪ. ಪಂಗಡ ಹಾಗೂ ಪಿಡಬ್ಲ್ಯೂಡಿ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆ ಅನ್ವಯಿಸುತ್ತದೆ.

ಆಸಕ್ತರು ಅರ್ಜಿ ಸಲ್ಲಿಕೆಗಾಗಿ ಎಸ್‌ಬಿಐ ಅಧಿಕೃತ ಜಾಲತಾಣ https://sbi.bank.in/web/careers/current-opening ಅಥವಾ https://ibpsreg.ibps.in/sbiaapr26/ಕ್ಕೆ ಭೇಟಿ ನೀಡಿ. ಜೂ.08ರೊಳಗೆ ಅರ್ಜಿ ಸಲ್ಲಿಸಬಹುದು.

**ಆಯ್ಕೆ ಪ್ರಕ್ರಿಯೆ:**
- ಮೆರಿಟ್ ಪಟ್ಟಿ
- ದಾಖಲೆ ಪರಿಶೀಲನೆ
- ವೈದ್ಯಕೀಯ ಪರೀಕ್ಷೆ

## ಬರೋಡಾದಲ್ಲಿ 5000 ಸ್ಥಾನಗಳು

ಬ್ಯಾಂಕ್ ಆಫ್ ಬರೋಡ 2026–27ನೇ ಸಾಲಿಗೆ ಅಪ್ರೆಂಟಿಸ್ ಕಾಯ್ದೆಯಡಿ 5000 ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ತರಬೇತಿಗಾಗಿ ಅಧಿಸೂಚನೆ ಹೊರಡಿಸಿದೆ.

ಭಾರತದಾದ್ಯಂತ ವಿವಿಧ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ತನ್ನ ಶಾಖೆಗಳಿಗೆ ಪದವೀಧರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಿದೆ.ಅಭ್ಯರ್ಥಿಯು ಮೇ 01ರಂತೆ 20–28 ವರ್ಷ ವಯೋಮಾನದವರಾಗಿರಬೇಕು. **ವಯೋಮಿತಿ ಸಡಿಲಿಕೆ:** ಒಬಿಸಿ ಅಭ್ಯರ್ಥಿಗಳಿಗೆ 03 ವರ್ಷಗಳು, ಪ.ಜಾತಿ ಹಾಗೂ ಪ.ಪಂಗಡದ ಅಭ್ಯರ್ಥಿಗಳಿಗೆ 05 ವರ್ಷಗಳು, ಪಿಡಬ್ಲ್ಯೂಬಿಡಿ ಅಭ್ಯರ್ಥಿಗಳಿಗೆ 10 ವರ್ಷಗಳು, ಪಿಡಬ್ಲ್ಯೂಬಿಡಿ ಒಬಿಸಿ ಅಭ್ಯರ್ಥಿಗಳಿಗೆ 13 ವರ್ಷಗಳು, ಪಿಡಬ್ಲ್ಯೂಬಿಡಿ ಪ.ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 15 ವರ್ಷಗಳು. ಸದರಿ ತರಬೇತಿಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಆಸಕ್ತ ಅಭ್ಯರ್ಥಿಗಳು ಜೂ.08ರೊಳಗೆ ಅಧಿಕೃತ ಜಾಲತಾಣ https://nats.education.gov.in/ ಅಥವಾ https://www.apprenticeshipindia.gov.in/ಗೆ ಭೇಟಿ ನೀಡಿ.

## ಪಂಜಾಬ್ ಮತ್ತು ಸಿಂಧ್ ಬ್ಯಾಂಕಿನಲ್ಲಿ ಅವಕಾಶ

**ನವದೆಹಲಿ:** ಪಂಜಾಬ್ ಮತ್ತು ಸಿಂಧ್ ಬ್ಯಾಂಕಿನಲ್ಲಿ ಅಪ್ರೆಂಟಿಸ್‌ಶಿಪ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಮೇ 21ರಿಂದ ಜೂ.06 ರವರೆಗೆ ಕಾಲಾವಕಾಶವಿದೆ. ದೇಶದ ವಿವಿಧ ರಾಜ್ಯದಲ್ಲಿನ ತನ್ನ ಬ್ಯಾಂಕ್ ಶಾಖೆಗಳಿಗೆ ಒಟ್ಟು 635 ಸ್ಥಾನಗಳಿಗೆ ಯಾವುದೇ ಪದವೀಧರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ 12 ತಿಂಗಳ ತರಬೇತಿ ಒದಗಿಸಲಿದೆ. ಆಸಕ್ತರು ಐಬಿಪಿಎಸ್‌ನ ಅಧಿಕೃತ ಜಾಲತಾಣ https://ibpsreg.ibps.in/psbeoaapr26/ಕ್ಕೆ ಭೇಟಿ ನೀಡಿ, ಆನ್ಲೈನ್ ಮೂಲಕ ಅರ್ಜಿ ಸಲ್ಲಿಕೆ ಮಾಡಬಹುದು.

**ಒಟ್ಟು 635 ಸ್ಥಾನಗಳು**

## ಜೆಸ್ಕಾಂನಲ್ಲಿ ಶಿಶಿಕ್ಷು ತರಬೇತಿ

**ಕಲಬುರಗಿ:** ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ(ಜೆಸ್ಕಾಂ)ವತಿಯಿಂದ ರಾಷ್ಟ್ರೀಯ ಶಿಶಿಕ್ಷು ಯೋಜನೆಯಡಿ 2026–27ನೇಸಾಲಿಗೆ ಇಂಜಿನಿಯರಿಂಗ್ ಪದವವೀಧರ ಹಾಗೂ ಡಿಪ್ಲೊಮಾ ಅಭ್ಯರ್ಥಿಗಳಿಗೆ ಶಿಶಿಕ್ಷು(ಅಪ್ರೆಂಟಿಸ್) ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ನಿಯಮಿತದ ಪ್ರಧಾನ ವ್ಯವಸ್ಥಾಪಕರು ತಿಳಿಸಿದ್ದಾರೆ.

ಇಂಜಿನಿಯರಿಂಗ್ ಪದವೀಧರ ಅಪ್ರೆಂಟಿಸ್ 175 ಸ್ಥಾನಗಳು, ಡಿಪ್ಲೊಮಾ ಅಪ್ರೆಂಟಿಸ್ 100 ಸ್ಥಾನಗಳು ಸೇರಿದಂತೆ ಒಟ್ಟು 275 ಅಭ್ಯರ್ಥಿಗಳನ್ನು ಒಂದು ವರ್ಷಗಳ ಅವಧಿಯವರೆಗೆ ಶಿಶಿಕ್ಷು ತರಬೇತಿಗಾಗಿ ಆಯ್ಕೆ ಮಾಡಿಕೊಳ್ಳಲಾಗುವುದು. ತರಬೇತಿ ಸಮಯದಲ್ಲಿ ಮಾಸಿಕವಾಗಿ ಎಂಜಿನಿಯರಿಂಗ್ ಪದವೀಧರ ಅಪ್ರೆಂಟಿಸ್‌ಗಳಿಗೆ ರೂ.9,000 ಹಾಗೂ ಡಿಪ್ಲೊಮಾ ಅಪ್ರೆಂಟಿಸ್‌ಗಳಿಗೆ ರೂ.8,000 ವೇತನ ನೀಡಲಾಗುವುದು. ಆಫ್ಲೈನ್ ಮುಖೇನ ಅರ್ಜಿ ಸಲ್ಲಿಸಲು ಜೂ.05ರವರೆಗೆ ಕಾಲಾವಕಾಶವಿದೆ. ಅರ್ಹ ಅಭ್ಯರ್ಥಿಗಳನ್ನು ಅರ್ಹತಾ ಪರೀಕ್ಷೆಯ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು. ಸದರಿ ಹುದ್ದೆಗಳ ಅರ್ಹತಾ ಮಾನದಂಡಗಳನ್ನು ಪೂರೈಸುವ ಆಸಕ್ತ ಉದ್ಯೋಗಾಕಾಂಕ್ಷಿಗಳು ಅಧಿಕೃತ ಜಾಲತಾಣ https://gescom.karnataka.gov.in/173/apprentice-recruitment/knಕ್ಕೆ ಭೇಟಿ ನೀಡಿ, ಅರ್ಜಿ ನಮೂನೆ ಪಡೆದು ಭರ್ತಿ ಮಾಡಿ, ನಿಗದಿತ ದಾಖಲೆಗಳನ್ನು ಲಗತ್ತಿಸಿ 'ಸಾಯಂಕಾಲ 8.00 ಗಂಟೆಯೊಳಗೆ ನೇರವಾಗಿ ಅಥವಾ ಅಂಚೆಯ ಮೂಲಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಸ್ಟೇಷನ್ ರೋಡ್ ಕಲಬುರಗಿ, 585102' ವಿಳಾಸಕ್ಕೆ ನಿಗದಿತ ದಿನಾಂಕದೊಳಗೆ ತಲುಪುವಂತೆ ಕಳುಹಿಸತಕ್ಕದ್ದು ಎಂದು ಅವರು ಅಧಿಸೂಚನೆಯಲ್ಲಿ ಸೂಚಿಸಿದ್ದಾರೆ.

**ಶೈಕ್ಷಣಿಕ ಅರ್ಹತೆ:**
- ಎಂಜಿನಿಯರಿಂಗ್ ಪದವೀಧರ ಅಪ್ರೆಂಟಿಸ್‌ಗೆ; ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ವಿಭಾಗಗಳಲ್ಲಿ ಬಿ.ಇ ಅಥವಾ ಬಿ.ಟೆಕ್ ಪದವಿ.
- ಡಿಪ್ಲೊಮಾ ಅಪ್ರೆಂಟಿಸ್‌ಗೆ; ಎಲೆಕ್ಟ್ರಿಕಲ್ ವಿಭಾಗದಲ್ಲಿ 03 ವರ್ಷಗಳ ಡಿಪ್ಲೊಮಾ.

## ಆಗ್ನೇಯ ಕೇಂದ್ರ ರೈಲ್ವೆಯಲ್ಲಿ 2 ಪ್ರತ್ಯೇಕ ನೇಮಕಾತಿ

**ಬಿಲಾಸ್ಪುರ್:** ಆಗ್ನೇಯ ಕೇಂದ್ರ ರೈಲ್ವೆ, ಬಿಲಾಸ್ಪುರ್ ವಿಭಾಗದಲ್ಲಿ 2026–27ನೇ ಸಾಲಿಗೆ ಅಪ್ರೆಂಟಿಸ್ ಕಾಯ್ದೆಯಡಿ 1191 ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಐಟಿಐ ಪೂರ್ಣಗೊಳಿಸಿರುವ ಅಭ್ಯರ್ಥಿಗಳನ್ನು ಒಂದು ವರ್ಷದವರೆಗೆ ತರಬೇತಿಗಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಅರ್ಜಿ ಸಲ್ಲಿಸಲು ಜೂ.11ರವರೆಗೆ ಕಾಲಾವಕಾಶವನ್ನು ನೀಡಲಾಗಿದೆ. ಸಂಬಂಧಿತ ಟ್ರೇಡ್‌ನಲ್ಲಿ ಐಟಿಐ ಅರ್ಹತೆ ಹೊಂದಿರುವ ಆಸಕರು ಎನ್‌ಎಪಿಎಸ್ ಅಧಿಕೃತ ಜಾಲತಾಣ https://www.apprenticeshipindia.gov.in/ಕ್ಕೆ ಭೇಟಿ ನೀಡಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

### ನಾಗ್ಪುರ್ ವಿಭಾಗದಲ್ಲಿ 1079 ಶಿಶಿಕ್ಷು ತರಬೇತಿ

**ನಾಗ್ಪುರ್:** ಆಗ್ನೇಯ ಕೇಂದ್ರ ರೈಲ್ವೆ(ಎಸ್‌ಇಸಿಆರ್)ನಲ್ಲಿ ಒಟ್ಟು 1079 ಅಪ್ರೆಂಟಿಸ್ ಸ್ಥಾನಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿದೆ.

ನಾಗ್ಪುರ್ ವಿಭಾಗಕ್ಕೆ 977 ಸ್ಥಾನ ಹಾಗೂ ವರ್ಕ್ ಶಾಪ್ ಮೋತಿಬಾಗ್‌ಗೆ 102 ಸ್ಥಾನಗಳಿಗೆ ಸಂಬಂಧಿತ ಟ್ರೇಡ್‌ನಲ್ಲಿ ಐಟಿಐ ಪೂರ್ಣಗೊಳಿಸಿರುವ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಳ್ಳಲಿದೆ. ಅರ್ಜಿ ಸಲ್ಲಿಸುವ ಕೊನೆದಿನಾಂಕಕ್ಕೆ 15 –24ರ ವಯೋಮಾನದವರಾಗಿರಬೇಕು. ಆಸಕ್ತರು ಜೂ.18ರೊಳಗೆ ಎನ್‌ಎಪಿಎಸ್ ಪೋರ್ಟಲ್ https://www.apprenticeshipindia.gov.in ಮೂಲಕ ಅರ್ಜಿ ಸಲ್ಲಿಸಬಹುದು.

ದಿನನಿತ್ಯದ ಉದ್ಯೋಗ ಹಾಗೂ ಇತರೆ ಶೈಕ್ಷಣಿಕ ಸುದ್ದಿಗಳಿಗಾಗಿ KarnatakaHelp.inಗೆ ಭೇಟಿ ನೀಡಿ.

## ವಾಕ್–ಇನ್ ಸಂದರ್ಶನಕ್ಕೆ ಆಹ್ವಾನ

**ಛತ್ತೀಸ್‌ಗಢ್:** ಬಚೇಲಿಯ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದ ಬೈಲಾಡಿಲ ಕಬ್ಬಿಣದ ಅದಿರು ಗಣಿಯಲ್ಲಿ ಅಪ್ರೆಂಟಿಸ್ ಕಾಯ್ದೆಯಡಿ ಅಪ್ರೆಂಟಿಸ್ ತರಬೇತಿಗೆ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ ವಾಕ್–ಇನ್ ಸಂದರ್ಶನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ವಿವಿಧ ವೃಂದದ ಟ್ರೇಡ್ ಅಪ್ರೆಂಟಿಸ್, ಪದವೀಧರ ಅಪ್ರೆಂಟಿಸ್ ಹಾಗೂ ತಂತ್ರಜ್ಞ ಅಪ್ರೆಂಟಿಸ್‌ಗಳಿಗೆ 180 ಸ್ಥಾನಗಳಿಗೆ ಭರ್ತಿ ನಡೆಯಲಿದೆ. ಸದರಿ ಅಪ್ರೆಂಟಿಸ್ ಹುದ್ದೆಗಳ ಅರ್ಹತಾ ಮಾನದಂಡಗಳನ್ನು ಪೂರೈಸುವ ಅರ್ಹ ಮತ್ತು ಆಸಕ್ತ ಅರ್ಜಿದಾರರು ಜೂನ್ 01 ರಿಂದ 11ರವರೆಗೆ ನಡೆಸಲಾಗುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಸಂಬಂಧಿತ ಟ್ರೇಡ್‌ನಲ್ಲಿ ಐಟಿಐ/4 ವರ್ಷದ ಎಂಜಿನಿಯರಿಂಗ್ ಪದವಿ/3 ವರ್ಷದ ಎಂಜಿನಿಯರಿಂಗ್ ಪದವೀಧರ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಬಹುದು. ಮುಖ್ಯವಾಗಿ ಟ್ರೇಡ್ ಅಪ್ರೆಂಟಿಸ್ ಅಭ್ಯರ್ಥಿಗಳು https://www.apprenticeshipindia.gov.in/ನಲ್ಲಿ ಹಾಗೂ ಪದವೀಧರ, ತಂತ್ರಜ್ಞ ಅಪ್ರೆಂಟಿಸ್ ಅಭ್ಯರ್ಥಿಗಳು https://nats.education.gov.in/ನಲ್ಲಿ ನೋಂದಣಿಯಾಗಿರಬೇಕು.

- ಸಂದರ್ಶನ,ದಾಖಲಾತಿ ಪರಿಶೀಲನೆ ಮೂಲಕ ಆಯ್ಕೆ

**ಸಂದರ್ಶನ ನಡೆಯುವ ಮುಖ್ಯ ದಿನಾಂಕಗಳು**

| | |
|---|---|
| ಟ್ರೇಡ್ ಅಪ್ರೆಂಟಿಸ್ | ಜೂ.01ರಿಂದ 06ವರೆಗೆ |
| ಪದವೀಧರ ಅಪ್ರೆಂಟಿಸ್ | ಜೂ.08ರಿಂದ 11ವರೆಗೆ |
| ತಂತ್ರಜ್ಞ ಅಪ್ರೆಂಟಿಸ್ | ಜೂ.08ರಿಂದ 11ವರೆಗೆ |

**ಸಂದರ್ಶನ ನಡೆಯುವ ವಿಳಾಸ:** ಬೈಲಾದಿಲಾ ಕಬ್ಬಿಣದ ಅದಿರು ಗಣಿ, ಬಚೇಲಿ ಸಂಕೀರ್ಣ. ತರಬೇತಿ, ಸುರಕ್ಷತೆ ಮತ್ತು ಪರಿಸರ ಇಲಾಖೆ ದಂತೇವಾಡ, ಬಚೇಲಿ–494553, ಛತ್ತೀಸ್‌ಗಢ.

## ನಾರ್ದರ್ನ್ ಕೋಲ್ಫೀಲ್ಡ್‌ನಲ್ಲಿ ಅಪ್ರೆಂಟಿಸ್

**ಸಿಂಗ್ರೌಲಿ:** ಕೋಲ್ ಇಂಡಿಯಾ ಲಿಮಿಟೆಡ್‌ನ ಅಂಗಸಂಸ್ಥೆಯಾಗಿರುವ ನಾರ್ದರ್ನ್ ಕೋಲ್ಫೀಲ್ಡ್ ಲಿಮಿಟೆಡ್(ಎನ್‌ಸಿಎಲ್)ನಲ್ಲಿ 2026–27ನೇ ಸಾಲಿಗೆ ಪದವೀಧರ, ಡಿಪ್ಲೊಮಾ, ಟ್ರೇಡ್ ಮತ್ತು ಪ್ಯಾರಾಮೆಡಿಕಲ್ ಅಪ್ರೆಂಟಿಸ್‌ಶಿಪ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

241 ಪದವೀಧರ ಅಪ್ರೆಂಟಿಸ್, 305 ಡಿಪ್ಲೊಮಾ ಅಪ್ರೆಂಟಿಸ್, 906 ಟ್ರೇಡ್ ಅಪ್ರೆಂಟಿಸ್ ಹಾಗೂ 155 ಪ್ಯಾರಾಮೆಡಿಕಲ್ ಅಪ್ರೆಂಟಿಸ್ ಸೇರಿದಂತೆ ಒಟ್ಟು 1607 ಸ್ಥಾನಗಳ ಅಭ್ಯರ್ಥಿಗಳ ಭರ್ತಿ ನಡೆಯಲಿದೆ. ಒಂದು ವರ್ಷದ ತರಬೇತಿ ಒದಗಿಸಲಿದೆ.

**ಪದವೀಧರ ಅಪ್ರೆಂಟಿಸ್;** ಅಭ್ಯರ್ಥಿಗಳು ಮಾನ್ಯತೆ ಪಡೆದ ಸಂಸ್ಥೆ ಅಥವಾ ವಿಶ್ವವಿದ್ಯಾಲಯದಿಂದ ಬಿ.ಎ/ಬಿ.ಕಾಂ/ಎಲ್.ಎಲ್.ಬಿ ಅಥವಾ ಸಂಬಂಧಿತ ವಿಭಾಗದಲ್ಲಿ ಬಿ.ಇ/ಬಿ.ಟೆಕ್ ಪದವಿ ಪೂರ್ಣಗೊಳಿಸಿರಬೇಕು.

**ಡಿಪ್ಲೊಮಾ ಅಪ್ರೆಂಟಿಸ್;** ಅಭ್ಯರ್ಥಿಗಳು ಮಾನ್ಯತೆ ಪಡೆದ ಸಂಸ್ಥೆ ಅಥವಾ ವಿಶ್ವವಿದ್ಯಾಲಯದಿಂದ ಸಂಬಂಧಿತ ವಿಭಾಗದಲ್ಲಿ ಡಿಪ್ಲೊಮಾ ಇನ್ ಎಂಜಿನಿಯರಿಂಗ್ ಅರ್ಹತೆಯನ್ನು ಹೊಂದಿರಬೇಕು.

**ಟ್ರೇಡ್ ಅಪ್ರೆಂಟಿಸ್;** ಅಭ್ಯರ್ಥಿಗಳು ಮಾನ್ಯತೆ ಪಡೆದ ಮಂಡಳಿಯಿಂದ 10ನೇ ತರಗತಿ ಉತ್ತೀರ್ಣರಾಗಿರಬೇಕು ಜೊತೆಗೆ NCVT/SCVTಯಿಂದ ನೀಡಲಾದ ಆಯಾ ಟ್ರೇಡ್‌ನಲ್ಲಿ ಐಟಿಐ ಉತ್ತೀರ್ಣರಾದ ಪ್ರಮಾಣಪತ್ರವನ್ನು ಹೊಂದಿರಬೇಕು.

**ಪ್ಯಾರಾ ಮೆಡಿಕಲ್ ಅಪ್ರೆಂಟಿಸ್;** ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಿಂದ ಸಂಬಂಧಿತ ವಿಷಯದಲ್ಲಿ ಡಿಪ್ಲೋಮಾ ಅಥವಾ ಪದವಿ ಪೂರ್ಣಗೊಳಿಸಿರಬೇಕು.

ಆಸಕ್ತರು ಅರ್ಜಿ ಸಲ್ಲಿಸಲು ಜೂ.15 ರೊಳಗೆ ಪದವಿ/ಡಿಪ್ಲೊಮಾ ಅಭ್ಯರ್ಥಿಗಳು ಎನ್‌ಎಟಿಎಸ್ ಅಧಿಕೃತ ವೆಬ್ಸೈಟ್ https://nats.education.gov.in/ಗೆ ಹಾಗೂ ಐಟಿಐ ಟ್ರೇಡ್ ಅಭ್ಯರ್ಥಿಗಳು ಎನ್‌ಎಪಿಎಸ್ ಅಧಿಕೃತ ವೆಬ್‌ಸೈಟ್ https://www.apprenticeshipindia.gov.inಗೆ ಭೇಟಿ ನೀಡಿ.

ತರಬೇತಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಜೂ.20ರಂದು ಪ್ರಕಟಿಸಲಿದೆ.

## ಎಸ್‌ಎಸ್‌ಬಿ ಕ್ರೀಡಾ ಕೋಟಾ ನೇಮಕ

### ಕಾನ್ಸ್ಟೇಬಲ್(ಜಿಡಿ) ಹುದ್ದೆಗಳು । ಅರ್ಜಿ ಸಲ್ಲಿಕೆಗೆ ಜೂ.07ರ ಗಡುವು

**ನವದೆಹಲಿ:** ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ(ಸಿಎಪಿಎಫ್)ಯಲ್ಲೊಂದಾದ ಸಶಸ್ತ್ರ ಸೀಮಾ ಬಲ(ಎಸ್‌ಎಸ್‌ಬಿ)ವು ಕ್ರೀಡಾ ಕೋಟಾದಡಿ ಗ್ರೂಪ್ 'ಸಿ' ಕಾನ್ಸ್ಟೇಬಲ್(ಸಾಮಾನ್ಯ ಕರ್ತವ್ಯ) ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂನ್ 07ಕೊನೆಯ ದಿನವಾಗಿದೆ. ಒಟ್ಟು 404 ಸ್ಥಾನಗಳಿಗೆ ಕ್ರೀಡಾ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಿದೆ. 10ನೇ ತರಗತಿ ಅಥವಾ ತತ್ಸಮಾನ ಅರ್ಹತೆ ಜೊತೆಗೆ ಕ್ರೀಡಾ ಸಾಧನೆಗೈದ ಅಭ್ಯರ್ಥಿಗಳು ಅರ್ಜಿ ಸಲ್ಲಿಕೆಗೆ ಅರ್ಹರು. ಅಭ್ಯರ್ಥಿಯು 18–24 ವರ್ಷ ವಯಸ್ಸಿನವರಾಗಿರಬೇಕು.

ಪ್ರತಿ ತಿಂಗಳಿಗೆ ರೂ.21,700ಗಳಿಂದ ರೂ.69,100ರವರೆಗೆ ಸಂಬಳ ನೀಡಲಾಗುತ್ತದೆ. ಒಬಿಸಿ ಹಾಗೂ ಇಡಬ್ಲ್ಯೂಎಸ್ ಅಭ್ಯರ್ಥಿಗಳಿಗೆ ರೂ.100 ಪಾವತಿಸಬೇಕಾಗುತ್ತದೆ. ಆದರೆ ಪ.ಜಾತಿ, ಪ.ಪಂಗಡ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯು ದಾಖಲಾತಿ ಪರಿಶೀಲನೆ, ಕ್ರೀಡಾ ಸಾಧನೆಗಳ ಪರಿಶೀಲನೆ(ಕ್ಷೇತ್ರ ಪ್ರಯೋಗ/ಕೌಶಲ್ಯ ಪರೀಕ್ಷೆ), ದೈಹಿಕ ಗುಣಮಟ್ಟ ಪರೀಕ್ಷೆ (ಪಿಎಸ್‌ಟಿ),ವಿವರವಾದ ವೈದ್ಯಕೀಯ ಪರೀಕ್ಷೆ(ಡಿಎಂಇ) ಹಾಗೂ ವೈದ್ಯಕೀಯ ಪರೀಕ್ಷೆಯ ಪುನರ್ವಿಮರ್ಶೆ(ಆರ್‌ಎಂಇ)ಯ ಮುಖೇನ ಅಂತಿಮ ಆಯ್ಕೆ ಮಾಡಲಾಗುತ್ತದೆ.

ಅರ್ಜಿ ಸಲ್ಲಿಸಲು ಇಚ್ಚಿಸುವ ಆಸಕ್ತ ಮತ್ತು ಅರ್ಹ ಅರ್ಜಿದಾರರು ಎಸ್‌ಎಸ್‌ಬಿ ಅಧಿಕೃತ ಜಾಲತಾಣ https://applyssb.com/SSB-Sports_CT_GD_26/applicationIndexಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

## ಪುಟ್ಟ ಸುದ್ದಿಗಳು

### ಸೀಟು ಹಂಚಿಕೆ ಪ್ರಕಟ

**ಬೆಂಗಳೂರು:** ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು 2026–27ನೇ ಶೈಕ್ಷಣಿಕ ವರ್ಷದ ಆದರ್ಶ ವಿದ್ಯಾಲಯ 6ನೇ ತರಗತಿ ಪ್ರವೇಶಕ್ಕೆ ಸಂಬಂಧಿಸಿದಂತೆ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶವನ್ನು ಪ್ರಕಟಿಸಿದೆ. ಮೊದಲ ಸುತ್ತಿನಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿಗಳು ಆಯಾ ವಿದ್ಯಾಲಯದಲ್ಲಿ ಪ್ರವೇಶ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಜೂ.03ವರೆಗೆ ಅವಕಾಶವಿದೆ ಎಂದು ಇಲಾಖೆ ತಿಳಿಸಿದೆ.

ವಿದ್ಯಾರ್ಥಿಗಳು/ಪೋಷಕರು ಆದರ್ಶ ವಿದ್ಯಾಲಯ ಅಧಿಕೃತ ಜಾಲತಾಣ http://164.100.133.7:82/frmap-pack.aspx?apln=mseatselದ ಮೂಲಕ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶವನ್ನು ವಿಕ್ಷೀಸಬಹುದು ಹಾಗೂ ಕಟ್‌ಆಫ್ ಮಾಹಿತಿಯನ್ನೊಳಗೊಂಡ ಪಿಡಿಎಫ್ ಡೌನ್ಲೋಡ್ ಮಾಡಿಕೊಳ್ಳಬಹುದು.

### ಪ್ರೋತ್ಸಾಹಧನ: ಅರ್ಜಿ ಆಹ್ವಾನ

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಮೆಟ್ರಿಕ್ ನಂತರದ ಕೋರ್ಸ್(ಪಿಯುಸಿ,ಪದವಿ, ಸ್ನಾತ–ಕೋತ್ತರ ಪದವಿ)ನಲ್ಲಿ ಮೊದಲ ಪ್ರಯತ್ನದಲ್ಲೇ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಪ.ಜಾತಿ ವರ್ಗದ ವಿದ್ಯಾರ್ಥಿಗಳಿಂದ ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ದ್ವಿತೀಯ ಪಿಯುಸಿ, 3 ವರ್ಷದ ಪಾಲಿಟೆಕ್ನಿಕ್ ಡಿಪ್ಲೋಮಾ, ಪದವಿ/ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರಬೇಕು. ಪ.ಜಾತಿ ವರ್ಗದ ಅಭ್ಯರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ಅಧಿಕೃತ ಅಂತರ್ಜಾಲ https://swd.karnataka.gov.in/ಕ್ಕೆ ಹಾಗೂ ಪ.ಪಂಗಡದ ವಿದ್ಯಾರ್ಥಿಗಳು https://twd.karnataka.gov.in/ಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

### ಪ್ರವೇಶಾತಿ ಆರಂಭ

**ಬೆಂಗಳೂರು:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2026–27ನೇ ಸಾಲಿಗೆ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರ(ಪಿಯುಸಿ ಸಮಾನಾಂತರ ಡಿಪ್ಲೋಮಾ,ಐಟಿಐ)ದ ವಿದ್ಯಾರ್ಥಿ ವಸತಿನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ 1, 2ಎ, 2ಬಿ, 3ಎ, 3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಕುಟುಂಬದ ಆದಾಯವು ಪ್ರವರ್ಗ 1, ಎಸ್.ಸಿ,ಎಸ್.ಟಿ 2.50 ಲಕ್ಷರೂ ಹಾಗೂ ಪ್ರವರ್ಗ 2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ ವರ್ಗದ 1 ಲಕ್ಷರೂಗಳ ಮಿತಿಯಲ್ಲಿರಬೇಕು. ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳು ಜೂ.06ರೊಳಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಜೂ.15ರೊಳಗೆ ರಾಜ್ಯ ಹಾಸ್ಟೆಲ್ ಪೋರ್ಟಲ್ https://shp.karnataka.gov.in/bcwd/Default.aspx ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕೋರ್ಸ್ ದಾಖಲಾತಿ ಶುರು

**ಬೀದರ್:** ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯವು 2026–27ನೇ ಶೈಕ್ಷಣಿಕ ಸಾಲಿನ ಪಶು ಸಂಗೋಪನೆ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಪಶು ಸಂಗೋಪನೆ ಕೋರ್ಸ್ ಎರಡು ವರ್ಷಗಳ ಅವಧಿಯದ್ದಾಗಿದೆ. ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಅರ್ಹತೆ ಹೊಂದಿರುವವರು ಈ ಕೋರ್ಸ್ ಪ್ರವೇಶ ಪಡೆಯಲು ಅರ್ಹರಿದ್ದು, ಅರ್ಜಿ ಸಲ್ಲಿಸಲು ಜೂನ್ 01ರಿಂದ ಜೂನ್ 30ರವರೆಗೆ ಕಾಲಾವಕಾಶವಿದೆ. ವಿದ್ಯಾರ್ಥಿಗಳಿಗೆ ಮಾಸಿಕ ರೂ. 1,000 ಶಿಷ್ಯವೇತನ ಸಿಗಲಿದೆ. ಆಸಕ್ತರು ಅರ್ಜಿ ಸಲ್ಲಿಸಲು ಕೆವಿಎಎಫ್‌ಎಸ್‌ಯು ಅಧಿಕೃತ ಜಾಲತಾಣ https://www.kvafsu.edu.in/admission.htmlಕ್ಕೆ ಭೇಟಿ ನೀಡಿ ಎಂದು ಕುಲಸಚಿವರು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

# ಕೆಇಎ ಪರಿಷ್ಕೃತ ಅಧಿಸೂಚನೆ–ಮರು ಅರ್ಜಿ

**ಸರ್ಕಾರದ ಆದೇಶದಂತೆ, ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ಅಳವಡಿಸಿಕೊಂಡು ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿರುವ ಅಧಿಸೂಚನೆಗಳನ್ನು ಹೊರತುಪಡಿಸಿ, ಇನ್ನುಳಿದ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು ಹೊಸ ರೋಸ್ಟರ್ ಬಿಂದುಗಳನ್ವಯ ಪರಿಷ್ಕೃತ ಅಧಿಸೂಚನೆ ಹೊರಡಿಸಲು ನಿರ್ದೇಶಿಸಲಾಗಿರುತ್ತದೆ. ಅದರಂತೆ ಸದರಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಂಬಂಧ ಮರು ಅರ್ಜಿ ಆಹ್ವಾನಿಸಲಾಗಿದೆ.**

## ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿಗಳ ಭರ್ತಿ

**ಬೆಂಗಳೂರು:** ಕೃಷಿ ಇಲಾಖೆಯಲ್ಲಿ ಕಲ್ಯಾಣಕರ್ನಾಟಕ ವೃಂದ ಹಾಗೂ ಉಳಿಕೆ ಮೂಲವೃಂದದಲ್ಲಿ ಖಾಲಿ ಇರುವ ಗ್ರೂಪ್–ಬಿ ಕೃಷಿ ಅಧಿಕಾರಿ(ಎಒ)ಮತ್ತು ಸಹಾಯಕ ಕೃಷಿ ಅಧಿಕಾರಿ(ಎಎಒ) ಹುದ್ದೆಗಳ ನೇರ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪರಿಷ್ಕೃತ ಅಧಿಸೂಚನೆ ಹೊರಡಿಸಿ, ಅರ್ಜಿ ಆಹ್ವಾನಿಸಿದೆ.

ಕಲ್ಯಾಣ ಕರ್ನಾಟಕ ವೃಂದದಲ್ಲಿ 257+16 ಹಿಂಬಾಕಿ ಹಾಗೂ ಮೂಲ ಉಳಿಕೆ ವೃಂದದಲ್ಲಿ 670+2 ಹಿಂಬಾಕಿ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಿಕೊಳ್ಳಲಿದೆ. ಅರ್ಜಿ ಸಲ್ಲಿಕೆ ಕೊನೆದಿನಾಂಕಕ್ಕೆ ಅಭ್ಯರ್ಥಿಗಳು ಕನಿಷ್ಠ ವಯೋಮಿತಿಯು 18 ವರ್ಷ ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 40 ವರ್ಷ, ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳಿಗೆ 43 ವರ್ಷ, ಪ.ಜಾತಿ/ಪ.ಪಂಗಡ/ಪ್ರವರ್ಗ–1 ಅಭ್ಯರ್ಥಿಗಳಿಗೆ 45 ವರ್ಷಗಳಾಗಿರಬೇಕು .ಆಸಕ್ತರು ಕೆಇಎ ಅಧಿಕೃತ ಜಾಲತಾಣ https://cetonline.karnataka.gov.in/kearecruitment2026app/loginಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

### ಪ್ರಮುಖ ದಿನಾಂಕಗಳು:

- ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭ ದಿನಾಂಕ: ಮೇ 30
- ಅರ್ಜಿ ಸಲ್ಲಿಸಲು ಕೊನೆಯ ದಿನ: ಜೂನ್ 20
- ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ: ಜೂನ್ 22
- ಪರೀಕ್ಷೆಯ ದಿನಾಂಕ: ಕೆಕೆ; ಜುಲೈ 25, ಆರ್‌ಪಿಸಿ; ಜುಲೈ 26, 2026

### ಶೈಕ್ಷಣಿಕ ಅರ್ಹತೆ:

**ಶೇ.85 ರಷ್ಟು ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿ ಹುದ್ದೆಗೆ;** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಸ್ಸಿ(ಕೃಷಿ) ಅಥವಾ ಬಿಸ್ಸಿ(ಆನರ್ಸ್) ಕೃಷಿ ಪದವಿ ಪಡೆದಿರಬೇಕು.

**ಶೇ.15 ರಷ್ಟು ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿ ಹುದ್ದೆಗೆ;** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಟೆಕ್(ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಅಥವಾ ಬಿ.ಟೆಕ್(ಆಹಾರ ತಂತ್ರಜ್ಞಾನ) ಅಥವಾ ಬಿಎಸ್ಸಿ(ಕೃಷಿ ಮಾರುಕಟ್ಟೆ ಮತ್ತು ಸಹಕಾರ) ಅಥವಾ ಬಿಎಸ್ಸಿ(ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ ಅಥವಾ ಬಿಎಸ್ಸಿ (ಆನರ್ಸ್) ಅಗ್ರಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ಅಥವಾ ಬಿಎಸ್ಸಿ(ಕೃಷಿ ಜೈವಿಕ ತಂತ್ರಜ್ಞಾನ) ಅಥವಾ ಬಿ.ಟೆಕ್(ಜೈವಿಕ ತಂತ್ರಜ್ಞಾನ) ಅಥವಾ ಬಿಎಸ್ಸಿ(ಅಗ್ರಿಕಲ್ಚರಲ್ ಇಂಜಿನಿಯರಿಂಗ್) ಅಥವಾ ಬಿ.ಟೆಕ್(ಅಗ್ರಿಕಲ್ಚರಲ್ ಇಂಜಿನಿಯರಿಂಗ್) ಪದವಿ ಹೊಂದಿರಬೇಕು.

## ವಿವಿಧ ಇಲಾಖೆಯಲ್ಲಿ ನಾನಾ ಎಂಜಿನಿಯರ್ ಹುದ್ದೆಗಳ ನೇಮಕಾತಿ

**ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿವಿಧ ಇಲಾಖೆಯಲ್ಲಿ ಉಳಿಕೆ ಮೂಲ ವೃಂದ ಹಾಗೂ ಸ್ಥಳೀಯ ವೃಂದದಲ್ಲಿ ಖಾಲಿ ಇರುವ ನಾನಾ ಹುದ್ದೆಗಳ ಭರ್ತಿಗಾಗಿ ಪರಿಷ್ಕೃತ ಅಧಿಸೂಚನೆ ಹೊರಡಿಸಿದೆ.

ಕೃಷಿ ಮಾರಾಟ ಇಲಾಖೆ(ಆರ್‌ಪಿಸಿ 10 ಹುದ್ದೆ), ಬೆಂಗಳೂರು ನಗರ ನೀರು ಸರಬರಾಜು ಒಳಚರಂಡಿ ಮಂಡಳಿ(ಆರ್‌ಪಿಸಿ 16+ ಕೆಕೆ 06 ಹುದ್ದೆ) ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ(ಆರ್‌ಪಿಸಿ 04+ ಕೆಕೆ 01 ಹುದ್ದೆ)ದಲ್ಲಿನ ಹುದ್ದೆಗಳಿಗೆ ನೇಮಕ ನಡೆಯಲಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆಯು ಮೇ 21ರಿಂದ ಆರಂಭವಾಗಿ, ಜೂ.04ಕ್ಕೆ ಅಂತ್ಯಗೊಳ್ಳಲಿದೆ. ಆಸಕ್ತರು ಅರ್ಜಿ ಸಲ್ಲಿಸಲು ಪ್ರಾಧಿಕಾರ ಅಧಿಕೃತ ಜಾಲತಾಣ https://cetonline.karnataka.gov.in/kearecruitment2026app/loginಕ್ಕೆ ಭೇಟಿ ನೀಡಿ.

**ಅರ್ಜಿ ಸಲ್ಲಿಸಲು ಬೇಕಾಗುವ ಶೈಕ್ಷಣಿಕ ಅರ್ಹತೆಯ ವಿವರ: ಸಹಾಯಕ ಅಭಿಯಂತರರು(ಸಿವಿಲ್) ಹಾಗೂ ಸಹಾಯಕಕಾರ್ಯಪಾಲಕ ಅಭಿಯಂತರರು(ಸಿವಿಲ್) ಹುದ್ದೆಗೆ** ಸಿವಿಲ್ ವಿಭಾಗದಲ್ಲಿ ಎಂಜಿನಿಯರಿಂಗ್ ಪದವಿ, **ಸಹಾಯಕ ಅಭಿಯಂತರರು(ಮೆಕ್ಯಾನಿಕಲ್) ಹುದ್ದೆಗೆ** ಮೆಕ್ಯಾನಿಕ್ ವಿಭಾಗದಲ್ಲಿ ಎಂಜಿನಿಯರಿಂಗ್ ಪದವಿ ಹಾಗೂ **ಸಹಾಯಕ ಅಭಿಯಂತರರು(ಕಂಪ್ಯೂಟರ್ ಸೈನ್ಸ್) ಹುದ್ದೆಗೆ** ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಎಂಜಿನಿಯರಿಂಗ್ ಪದವಿ ಹೊಂದಿರಬೇಕು. ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಪ್ರಕ್ರಿಯೆ ಇರಲಿದೆ.

## ಯುಜಿಸಿ ನೆಟ್ ಪರೀಕ್ಷೆ ನೋಂದಣಿ ಪ್ರಾರಂಭ

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು 2026ನೇ ಸಾಲಿನ ಜೂನ್ ಮಾಹೆಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ(CSIR), ವಿಶ್ವವಿದ್ಯಾನಿಲಯದ ಅನುದಾನ ಆಯೋಗ ಜಂಟಿ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ನೆಟ್)ಯ ನೋಂದಣಿಗೆ ಅರ್ಜಿ ಆಹ್ವಾನಿಸಲಾಗಿದೆ.

ಸಿಬಿಟಿಯು ಜು.17 ಮತ್ತು 18ರಂದು ನಡೆಯಲಿದೆ. ಭಾರತೀಯ ವಿಶ್ವವಿದ್ಯಾಲಯಗಳು, ಕಾಲೇಜುಗಳಲ್ಲಿ, ರಾಷ್ಟ್ರೀಯ ಪ್ರಯೋಗಾಲಯಗಳಲ್ಲಿ, ವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಹಾಗೂ ಇತರೆ ಸಂಶೋಧನಾ ಕ್ಷೇತ್ರಗಳಲ್ಲಿ ಜೂನಿಯರ್ ರಿಸರ್ಚ್ ಫೆಲೋಶಿಪ್, ಪಿಎಚ್‌ಡಿ ಪ್ರವೇಶ ಮತ್ತು ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಭಾರತೀಯ ಪ್ರಜೆಗಳ ಅರ್ಹತೆಯನ್ನು ನಿರ್ಧರಿಸುವ ಪರೀಕ್ಷೆಯಿದಾಗಿದೆ.

**ಶೈಕ್ಷಣಿಕ ಅರ್ಹತೆ:** ಕನಿಷ್ಠ 55% ಅಂಕಗಳೊಂದಿಗೆ ಅರ್ಹತಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ

**ಅರ್ಜಿ ಸಲ್ಲಿಕೆ ಹೇಗೆ?:** ಸದರಿ ಪರೀಕ್ಷೆಗೆ ಅರ್ಜಿ ಸಲ್ಲಿಸ ಬಯಸುವ ಆಸಕ್ತ ಅಭ್ಯರ್ಥಿಗಳು ಜೂನ್ 19ರೊಳಗೆ ಎನ್‌ಟಿಎ ಅಧಿಕೃತ ವೆಬ್‌ಸೈಟ್ https://csirnet.nta.nic.in/ ಗೆ ಭೇಟಿ ನೀಡಿ. ಆನ್ಲೈನ್ ಮೂಲಕ ಅರ್ಜಿ ಸಲ್ಲಿಕೆ ಮಾಡಬಹುದು.

**ಅರ್ಜಿ ಶುಲ್ಕ:** ಸಾಮಾನ್ಯ ವರ್ಗದವರಿಗೆ ರೂ.1150, ಇಡಬ್ಲ್ಯೂಎಸ್ ಹಾಗೂ ಒಬಿಸಿ ವರ್ಗದವರಿಗೆ ರೂ.600, ಪ.ಜಾತಿ, ಪ.ಪಂಗಡ, ಪಿ.ಡಬ್ಲ್ಯೂ.ಡಿ ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳಿಗೆ ರೂ.325 ಅರ್ಜಿ ಶುಲ್ಕ ಇರಲಿದೆ.

**ಅರ್ಜಿ ನಮೂನೆ ತಿದ್ದುಪಡಿಗೆ ಅವಕಾಶ:** ಅಭ್ಯರ್ಥಿಗಳು ತಾವು ಸಲ್ಲಿಸಿದ ಅರ್ಜಿ ನಮೂನೆಯನ್ನು ಮಾರ್ಪಾಡು ಮಾಡಲು ಜೂನ್ 22–23ವರೆಗೆ ಅವಕಾಶವಿದೆ.

**Education News**
WhatsApp channel

**ಶೈಕ್ಷಣಿಕ ಸುದ್ದಿಗಳನ್ನು ದಿನನಿತ್ಯ ತಪ್ಪದೇ ಪಡೆಯಲು ನಮ್ಮ ಅಧಿಕೃತ ವಾಟ್ಸಾಪ್ ಚಾನೆಲ್‌ಗೆ ತಪ್ಪದೇ ಜಾಯಿನಾಗಿ.**

ಅರ್ಜಿ ಸಲ್ಲಿಸಲು ಜೂ.30ರ ಗಡುವು । ಲಿಖಿತ ಪರೀಕ್ಷೆ ಮೂಲಕ ಆಯ್ಕೆ

## ಬಳ್ಳಾರಿ ಡಿಸಿಸಿ ಬ್ಯಾಂಕ್: ಪರಿಷ್ಕೃತ ಅಧಿಸೂಚನೆ ಬಿಡುಗಡೆ

**ಹೊಸಪೇಟೆ:** ಇಲ್ಲಿನ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ(ಡಿಸಿಸಿ ಬ್ಯಾಂಕ್)ವು ಕಲ್ಯಾಣ ಕರ್ನಾಟಕ ಮತ್ತು ಮೂಲ ಉಳಿಕೆ ವೃಂದದಡಿ ನಾನಾ ಹುದ್ದೆಗಳ ನೇರ ನೇಮಕಾತಿಗಾಗಿ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಿ, ಅರ್ಜಿ ಆಹ್ವಾನಿಸಲಾಗಿದೆ.

ವ್ಯವಸ್ಥಾಪಕ/ಪ್ರಥಮ ದರ್ಜೆ ಸಹಾಯಕ(ಎಫ್‌ಡಿಎ) 22 ಸ್ಥಾನಗಳು, ದ್ವಿತೀಯ ದರ್ಜೆ ಸಹಾಯಕ(ಎಸ್‌ಡಿಎ) 28 ಸ್ಥಾನಗಳು, ಓರ್ವ ವಾಹನ ಚಾಲಕ, ಕಿರಿಯ ಸೇವಕರು 31 ಸ್ಥಾನಗಳಿಗೆ ಸೇರಿದಂತೆ ಒಟ್ಟು 82 ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಯಾವುದೇ ಪದವಿ/ಪಿಯುಸಿ/ಎಸ್ಸೆಸ್ಸೆಲ್ಸಿ ಅರ್ಹತೆ ಹೊಂದಿರುವವರು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ ಲಿಂಕ್(https://manageexam.com/BDCCB/index.html) ಮೂಲಕ ಜೂ.30ರೊಳಗೆ ಅರ್ಜಿ ಸಲ್ಲಿಸಬಹುದು.

**ವಯಸ್ಸಿನ ಮಿತಿ ಏನು?:–** ಜೂ.30ರಂತೆ ಅಭ್ಯರ್ಥಿಗಳ ಕನಿಷ್ಠ ವಯೋಮಿತಿಯು 18 ವರ್ಷಗಳು ಹಾಗೂ ಗರಿಷ್ಠ ವಯೋಮಿತಿಯು ಪ.ಜಾತಿ, ಪ.ಪಂಗಡ ಮತ್ತು ಹಿಂದುಳಿದ ವರ್ಗಗಳ ಪ್ರವರ್ಗ–1ರವರಿಗೆ 40 ವರ್ಷ, ಇತರೆ ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ ಮತ್ತು 3ಬಿಗೆ 38 ವರ್ಷದವರಿಗೆ ಹಾಗೂ ಇತರೆ ವರ್ಗದವರಿಗೆ 35 ವರ್ಷಗಳು. ಸರ್ಕಾರಿ ನಿಯಮಗಳ ಪ್ರಕಾರ, ವಿಕಲಚೇತನ(10 ವರ್ಷ), ವಿಧವೆ ಮಹಿಳೆ(10 ವರ್ಷ) ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆ ನೀಡಲಾಗಿದೆ.




**ವಿದ್ಯಾರ್ಹತೆ:**

- **ವ್ಯವಸ್ಥಾಪಕ/ಪ್ರಥಮ ದರ್ಜೆ ಸಹಾಯಕ(ಎಫ್‌ಡಿಎ):** ಯಾವುದೇ ಪದವಿ
- **ದ್ವಿತೀಯ ದರ್ಜೆ ಸಹಾಯಕ(ಎಸ್‌ಡಿಎ):** ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಅರ್ಹತೆ
- **ವಾಹನ ಚಾಲಕ:** ಎಸ್ಸೆಸ್ಸೆಲ್ಸಿ (ಕನ್ನಡ ಒಂದು ಭಾಷೆಯಾಗಿ ಓದಿರಬೇಕು) ಜೊತೆಗೆ ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು.
- **ಕಿರಿಯ ಸೇವಕ:** ಎಸ್ಸೆಸ್ಸೆಲ್ಸಿ (ಕನ್ನಡ ಒಂದು ಭಾಷೆಯಾಗಿ ಓದಿರಬೇಕು).

**ಸಂಬಳ ಎಷ್ಟೆಷ್ಟು ಸಿಗಲಿದೆ?:–** ವ್ಯವಸ್ಥಾಪಕ/ಪ್ರಥಮ ದರ್ಜೆ ಸಹಾಯಕ(ಎಫ್‌ಡಿಎ) ಹುದ್ದೆಗೆ ರೂ.44425 ರಿಂದ 83700ವರೆಗೆ, ದ್ವಿತೀಯ ದರ್ಜೆ ಸಹಾಯಕ(ಎಸ್‌ಡಿಎ) ಹುದ್ದೆಗೆ ರೂ.34100 ರಿಂದ 67600, ವಾಹನ ಚಾಲಕ ಹುದ್ದೆಗೆ ರೂ.31775 ರಿಂದ 61300ವರೆಗೆ ಹಾಗೂ ಕಿರಿಯ ಸೇವಕ ಹುದ್ದೆಗೆ ರೂ.29600 ರಿಂದ 52800ವರೆಗೆ ನೀಡಲಾಗುತ್ತದೆ.

### ಅರ್ಜಿ ಸಲ್ಲಿಕೆ ಮುಖ್ಯ ದಿನಾಂಕಗಳು:

- **ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ: ಜೂನ್ 06**
- **ಅರ್ಜಿ ಸಲ್ಲಿಸಲು ಕೊನೆ ದಿನ: ಜೂನ್ 30**
- **ಅಧಿಕೃತ ಜಾಲ:** www.bellarydcc.bank.in/

**ಸರ್ಕಾರದ ಆದೇಶದಂತೆ, ರೋಸ್ಟರ್ ಬಿಂದು ಮತ್ತು ಒಳ ಮೀಸಲಾತಿಯನ್ನು ಅನ್ವಯಿಸಿ ಪರಿಷ್ಕೃತ ಅಧಿಸೂಚನೆ ಹೊರಡಿಸಲಾಗಿದೆ ಎಂದು ಬಿಡಿಸಿಸಿ ಬ್ಯಾಂಕ್ ಮುಖ್ಯ ನಿರ್ವಾಹಣಾಧಿಕಾರಿಗಳು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.**

**ಅಭ್ಯರ್ಥಿಗಳ ಗಮನಕ್ಕೆ:** ಅರ್ಜಿ ಸಲ್ಲಿಸುವಾಗ ಯಾವುದೇ ತಾಂತ್ರಿಕ ಸಮಸ್ಯೆ ಅಥವಾ ಸಮಸ್ಯೆ ಎದುರಾದಲ್ಲಿ ಕಚೇರಿ ಸಮಯದಲ್ಲಿ ಸಹಾಯವಾಣಿ ಸಂಖ್ಯೆಗಳಿಗೆ: 98804 21742, 91872 35482 ಅಥವಾ ಇ–ಮೇಲ್: bdcc@gmail.com ವಿಳಾಸ ದ ಮೂಲಕ ಸಂಪರ್ಕಿಸಬಹುದು.